### ಧ್ವನಿಪೂರ್ಣ ಕಥೆ

‘ಗಿಡದ ದೇವರು’ (ಮೊದೂರು ತೇಜ ಅ.14) ಕಥೆಯಲ್ಲಿ ಹಳ್ಳಿ ಜನರೆಲ್ಲ ಊರ ಹೊರಗೆ ಹೊರಬೀಡು ಹೋಗಿ ತಮಗೆ ತೋಚಿದ ಭಕ್ಷಗಳನ್ನು ಮಾಡಿ ನೆಂಟರಿಷ್ಟರಿಗೆ ನೀಡಿ, ತಾವೂ ಸವಿದು ಸಾಯಂಕಾಲ ತಮ್ಮ ಮನೆಗಳಿಗೆ ಹಿಂದಿರುಗುತ್ತಾರೆ. ಅದರಂತೆ ಈಗಲೂ ನಮ್ಮ ಕಡೆ ಕೆಲವು ಹಳ್ಳಿಗಳಲ್ಲಿ ಮೂರು ವರ್ಷಕ್ಕೊಮ್ಮೆ ಕಾರ್ತಿಕ ಮಾಸದಲ್ಲಿ ಊರಿಗೆ ಒಳ್ಳೆಯದಾಗಲಿ ಎಂದು ಗ್ರಾಮದೇವತೆಯೊಂದಿಗೆ ಊರಹೊರಗೆ ಹೊರಬೀಡು ಬಿಡುವ ಪದ್ಧತಿ ಇದೆ.

—ರಮಾನಂದ ರೆಡ್ಡಿ, ಚಿತ್ರದುರ್ಗ

### ಮುಗಿದ ಖೆಡ್ಡಾ ನೆನಪು

‘ಆನೆ ದಾರಿಗೆ ಅಡ್ಡ ಅದು ಖೆಡ್ಡಾ’ (ಜಗನ್ನಾಥ ಪ್ರಕಾಶ್ ಎಸ್. ಅ.14) ಅಚ್ಚರಿ ಮೂಡಿಸಿತು. ಕಾಡಾನೆಗಳನ್ನು ಸೆರೆಹಿಡಿದು ಪಳಗಿಸುವ, ಕಳೆದ 50 ವರ್ಷಗಳಿಂದ ನಿಂತುಹೋಗಿರುವ ‘ಖೆಡ್ಡಾ’ ಕಾರ್ಯಾಚರಣೆಯ ಕಥೆ ರೋಮಾಂಚಕವಾಗಿತ್ತು.

—ಪಿ.ಜಯವಂತ ಪೈ, ಕುಂದಾಪುರ

### ಒಳ್ಳೆಯ ಸಂಚಿಕೆ

ಅ.14ರ ‘ಸುಧಾ’ ಸಂಚಿಕೆ ತುಂಬ ಚೆನ್ನಾಗಿತ್ತು. ‘ನಿಮ್ಮೊಡನೆ’, ‘ಖೆಡ್ಡಾ’ ಮತ್ತು ‘ಮೈಸೂರು ನಿಟ್ಟುಸಿರು’ ಲೇಖನಗಳು ಚೆನ್ನಾಗಿವೆ. ಮೈಸೂರಿನ ಇನ್ನಷ್ಟು ಹೆಗ್ಗುರುತಿನ ಚಿತ್ರಗಳು, ಸ್ವಾತಂತ್ರ್ಯಾನಂತರದಲ್ಲಿ ಉಂಟಾದ ಅಭಿವೃದ್ಧಿಗಳ ಬಗ್ಗೆಯೂ ವಿವರಗಳಿದ್ದರೆ ಇನ್ನಷ್ಟು ರೋಚಕವಾಗಿರುತಿತ್ತು. ‘ನಿಮ್ಮ ಪುಟ’ದಲ್ಲಿ ‘ರೇಡಿಯೊ ಆಲಿಸಲಿಕ್ಕೂ ಪರವಾನಗಿ’ ಬರಹದಲ್ಲಿ ರೇಡಿಯೊ ಪರವಾನಗಿ 1991ರಲ್ಲಿ ಎಂದು ಬರೆದಿದ್ದಾರೆ. ಆದರೆ ಅದು ರದ್ದಾಗಿದ್ದು ಮೊರಾರ್ಜಿ ದೇಸಾಯಿ ಅವರ ಸರ್ಕಾರದ ಕಾಲದಲ್ಲಿ (1977–80). ಎಲ್.ಕೆ. ಅಡ್ವಾಣಿಯವರು ವಾರ್ತಾ ಮತ್ತು ಪ್ರಸಾರ ಮಂತ್ರಿಯಾಗಿದ್ದರು ಎಂದು ನೆನಪು.

—ಎನ್. ರಾಘವನ್, ಬೆಂಗಳೂರು

### ಚಿಂತನಾರ್ಹ ಲೇಖನ

‘ಮಕ್ಕಳ ಸ್ಕೂಲು ಮನೇಲಿ ಅಲ್ಲ!’ (ರಘುನಾಥ ಚ.ಹ. ಅ. 14) ಎಂಬ ಹೆಸರಿನಲ್ಲಿ ‘ನಿಮ್ಮೊಡನೆ’ ಪುಟದಲ್ಲಿ ಬರೆದಿರುವ ಲೇಖನ ಅಂಗೈ ಕನ್ನಡಿಯಂತಿದೆ. ಒಂದನೇ ತರಗತಿಯಿಂದ ಆದಷ್ಟು ಬೇಗನೆ ಶಾಲೆ, ತರಗತಿಗಳು ಆರಂಭವಾದರೆ ಮಕ್ಕಳ ಮುಂಬರುವ ಜೀವನವೂ ಸುಧಾರಿಸೀತು. ಮಕ್ಕಳು ಶಾಲೆಗೆ ಹೋಗಲಾರಂಭಿಸಿದ ನಂತರ ಕೆಲವು ಮಕ್ಕಳು ಓದುವುದನ್ನೂ, ಬರೆಯುವುದನ್ನೂ ಮರೆತುಬಿಟ್ಟಿದ್ದಾರೆಂಬ ಈಚಿನ ಸುದ್ದಿಯೊಂದನ್ನು ಕೇಳಿ ಎದೆಯೊಡೆದಂತಾಯಿತು.

—ನಿರುಕ್ತಾ

### ಪುನರಾವರ್ತನೆ

ಸೆ. 30ರ ಸಂಚಿಕೆಯಲ್ಲಿ ‘ವಿಚಾರ ಲಹರಿ’ ಪುಟದಲ್ಲಿ ಪ್ರಕಟವಾದ ಪುರಂಜೀವಿ ಅವರ ‘ಸಾಧನ–ಸಾಧ್ಯ’ ಲೇಖನ ಅ. 14ರ ಸಂಚಿಕೆಯಲ್ಲಿಯೂ ಪುನರಾವರ್ತಿತವಾಗಿದೆ.

—ವಿಜಯಾ ಪ್ರಸಾದ್, ಬೆಂಗಳೂರು



ಹೌದು. ತಾಂತ್ರಿಕ ಕಾರಣಗಳಿಂದಾಗಿ ಲೇಖನ ಪುನರಾವರ್ತನೆಯಾಗಿದೆ. ಪ್ರಮಾದಕ್ಕಾಗಿ ವಿಷಾದಿಸುತ್ತೇವೆ.

—ಸಂ.

### ಮೈಸೂರು ನಿಟ್ಟುಸಿರು



‘ಮೈಸೂರು ನಿಟ್ಟುಸಿರು’ (ಕೆ. ಓಂಕಾರಮೂರ್ತಿ, ಅ.14) ಲೇಖನ ಪ್ರತಿ ಕನ್ನಡಿಗರೂ ಹೃದಯವನ್ನೂ ಮನಸ್ಸನ್ನೂ ಒಮ್ಮೆ ತೆರೆದು ನೋಡಿಕೊಳ್ಳುವಂತಿದೆ. ನಮ್ಮ ಪೂರ್ವಿಕರು ಹಿಂದಿನಿಂದಲೂ ಉಳಿಸಿಕೊಂಡು ಬಂದಿರುವ ವೈಭವದ ದಸರಾ ಸಾಂಸ್ಕೃತಿಕ ಪರಂಪರೆ ಇಂದು ಮಸುಕಾಗುತ್ತಿರುವುದು ನೋವಿನ ಸಂಗತಿ. ನೈಸರ್ಗಿಕ ಸೊಬಗು, ವೈಭವದ ಅರಮನೆ, ಕಲೆ ಸಾಹಿತ್ಯ, ಸಂಗೀತ, ವಾಸ್ತುಶಿಲ್ಪ, ಧಾರ್ಮಿಕ ಸಂಪ್ರದಾಯಗಳ ಶಾಂತಿತಾಣವಾದ ಮೈಸೂರಿನಲ್ಲಿ ಮೈಸೂರಿನಲ್ಲಿ ಹಾಗೂ ನಮ್ಮ ಕರ್ನಾಟಕದ ಇತರ ಕಡೆಗಳಲ್ಲೂ ಇತ್ತೀಚೆಗೆ ನಡೆಯುತ್ತಿರುವ ಅವಘಡಗಳು ಎಂಥವರನ್ನೂ ಬೆಚ್ಚಿಬೀಳಿಸುವಂತಿವೆ.

—ಸುಶೀಲಾ ಸೋಮಶೇಖರ್, ಹಾಸನ

ಲೇಖನ ಚೆನ್ನಾಗಿದೆ. ಮೈಸೂರಿನ ಇವತ್ತಿನ ಪರಿಸ್ಥಿತಿಯನ್ನು ಲೇಖಕರು ಚೆನ್ನಾಗಿ ಬರೆದಿದ್ದಾರೆ. ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಎತ್ತಿಹಿಡಿಯುವಲ್ಲಿ ಪ್ರಮುಖ ಪಾತ್ರವಹಿಸಿದ ಮೈಸೂರು, ಇವತ್ತು ಅನಾಚಾರ, ಅತ್ಯಾಚಾರಗಳತ್ತ ಸಾಗುತ್ತಿರುವುದು ದುರದೃಷ್ಟಕರ. ಸ್ವಚ್ಛ ಸಾಂಸ್ಕೃತಿಕ ನಗರಿ ಮೈಸೂರು ಬೆಳೆಯಲಿ, ಆದರೆ ಪರಂಪರೆ ಸಂಸ್ಕೃತಿಗೆ ಧಕ್ಕೆಯಾಗದಂತೆ ಎಚ್ಚರ ಎಲ್ಲರಲ್ಲೂ ಇರಲಿ.

—ರಾಘವೇಂದ್ರ ಜೋಯ್ಸ್, ಮೈಸೂರು

ಬದಲಾಗುತ್ತಿರುವ ಮೈಸೂರು ದಸರೆಯ ಸಂದರ್ಭದಲ್ಲಿಯೇ ಹೆಚ್ಚು ಕಾಡುತ್ತದೆ. ಜೀವನೋಪಾಯಕ್ಕಾಗಿ, ಉನ್ನತ ಶಿಕ್ಷಣಕ್ಕಾಗಿ, ಉದ್ಯೋಗ ನಿಮಿತ್ತ ಮೈಸೂರಿನಿಂದ ಬೇರೆ ಸ್ಥಳಕ್ಕೆ ಹೋಗಿ ನೆಲೆಸಿ ದಶಕಗಳೇ ಕಳೆದರೂ ಮೈಸೂರು ನಮಗೆ ಹೆಮ್ಮೆಯ ಗುರುತಾಗಿತ್ತು. ಆದರೆ ಈಗ ನಾವು ಮೈಸೂರಿನವರೆಂದು ಹೇಳಿಕೊಳ್ಳುವ ಹೆಮ್ಮೆಯ ಭಾವ ನಿಧಾನಕ್ಕೆ ಮರೆಯಾಗುತ್ತಿದೆ. ನಿಜವಾದ ಮೈಸೂರಿನ ಅಭಿಮಾನಿಗಳು ಒಂದಾಗಿ ಸಂಘಟಿತರಾಗುವುದಕ್ಕೆ ಇದು ಸಕಾಲ.

—ಬಾಣಾವರ ಮಂಜುನಾಥ, ಬೆಂಗಳೂರು

ಮೈಸೂರಿನ ನಿಟ್ಟುಸಿರು ಲೇಖಕರ ನಿಟ್ಟುಸಿರೂ ಆಗಿದೆ. ಮೈಸೂರು ಮಹಾರಾಜರ ಕಾಲದ ವರ್ಚಸ್ಸು, ನವರಾತ್ರಿಯ ವಿಜೃಂಭಣೆ ಇಲ್ಲದಿದ್ದರೂ, ಈಗಲೂ ಲಕ್ಷಾಂತರ ಜನರ ಆಕರ್ಷಣೆಗೆ ದೀಪಾಲಂಕಾರ, ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಸ್ವಾಗತಿಸುತ್ತದೆ. ದಸರಾ ಹಬ್ಬದ ಸಮಯದಲ್ಲಿ ಲೇಖನವು ಓದುಗರು ಮೈಸೂರಿಗೆ ಬರಲು ಹಿಂದೆ ಮುಂದೆ ನೋಡುವಂತೆ ಮಾಡಿ ನಿರಾಸೆ ಮೂಡಿಸಿದೆ

—ಎಂ. ಆರ್. ಚಂದ್ರಶೇಖರ್

ಲೇಖನ ಓದಿ ನಿಟ್ಟುಸಿರು ಬಿಡುವಂತಾಯಿತು. ಮೈಸೂರು ದಸರಾ ದಿನೇ ದಿನೇ ತನ್ನ ವರ್ಚಸ್ಸನ್ನು ಕಳೆದುಕೊಳ್ಳುತ್ತಿರುವುದು ವಿಷಾದದ ಸಂಗತಿ. ದೇಶಿಯರಲ್ಲದೆ ವಿದೇಶಿಯರೂ ಸಂಭ್ರಮಿಸುತ್ತಿದ್ದ ದಸರಾ ಈಗ ಕಳೆಗುಂದಿದೆ. ಉಳ್ಳವರು ಕಾಸು ಖರ್ಚು ಮಾಡಿ ಸಂತಸಪಡುತ್ತಿದ್ದರೆ, ಸಣ್ಣಪುಟ್ಟ ವ್ಯಾಪಾರಿಗಳು ನಾಲ್ಕು ಕಾಸು ದುಡಿಮೆ ಮಾಡಿಕೊಂಡು ಜೀವನದಲ್ಲಿ ನೆಮ್ಮದಿಯನ್ನು ಕಾಣುತ್ತಿದ್ದರು. ಮೈಸೂರು ದಸರಾ ಕೂಡ ಹಂಪೆಯ ಗತ ವೈಭವದಂತೆ ಆಗದಿರಲು ಈಗಿನಿಂದಲೇ ಸಂಬಂಧಪಟ್ಟವರು ಯೋಜನೆಗಳನ್ನು ರೂಪಿಸಬೇಕಾಗಿದೆ.

—ಸು. ವಿಜಯಲಕ್ಷ್ಮಿ, ಶಿವಮೊಗ್ಗ

ಅತ್ಯುತ್ತಮ ಲೇಖನ. ಫುಟ್‌ಪಾತ್ ಹಾಸುಕಲ್ಲು ಹೋಗಿ ಬ್ಲಾಕಿಂಗ್ ಆಗಿದೆ. ಸ್ವಚ್ಛ ನಗರಿ ಕಸ, ಪ್ಲಾಸ್ಟಿಕ್, ಮದ್ಯ ಮಾಂಸ ತ್ಯಾಜ್ಯಗಳಿಂದ ತುಂಬಿದೆ. ರಸ್ತೆ ಬದಿಯ ವ್ಯಾಪಾರ ಹಕ್ಕಾಗಿ ರಸ್ತೆಯನ್ನೇ ಆಕ್ರಮಿಸಿದೆ. ಬರೆದರೆ ಲೇಖನ ಅಲ್ಲ ಪುಸ್ತಕವೇ ಆಗುತ್ತದೆ.

—ಜಗದೀಶ ಬಿ. ಹೊಸೂರು, ಮೈಸೂರು

ಮುಖಪುಟ ಲೇಖನ ಸಕಾಲಿಕವಾಗಿದ್ದು, ವೈಭವದ ಪರಂಪರೆಯನ್ನು ಮುನ್ನಡೆಸಲು ಎಲ್ಲರೂ ಗಮನನೀಡಬೇಕು. ಸಂಸ್ಕೃತಿ, ದಸರಾ ಮಹತ್ವ ಮರೆಯಾಗದೆ, ಮೈಸೂರು ಅರಮನೆಗಳ ನಗರವಾಗಿಯೇ ಇರಲಿ.

—ಎನ್. ಶ್ರೀಕಂಠ, ಯಲಹಂಕ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in